# ಕೃಷ್ಣಸಖ ಸಂತ ನರಸೀ ಮೆಹ್ತಾ

ಸ್ವಾಮಿ ವೀರೇಶಾನಂದ

**‘ವೈಷ್ಣವಜನ ತೋ ತೇನೇ ಕಹಿಯೇ ರೇ ಜೋ ಪೀಡ ಪರಾಯೈ ಜಾನೇ ರೇ’** – ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾಗಿದ್ದ ಈ ಭಜನೆಯನ್ನು ಯಾರು ತಾನೇ ಕೇಳಿಲ್ಲ! ‘ಯಾರು ಇತರರ ಕಷ್ಟವನ್ನು ಕಂಡು ಮರುಗುತ್ತಾರೆಯೋ ಅವರೇ ನಿಜವಾದ ವೈಷ್ಣವರು’ ಎಂದು ಆರಂಭವಾಗುವ ಈ ಸುಂದರ ಗೀತೆಯನ್ನು ರಚಿಸಿದವರು ಗುಜರಾತಿನ ಅತ್ಯಂತ ಪ್ರಸಿದ್ಧ ಭಕ್ತ-ಸಂತ ಹಾಗೂ ಗುಜರಾತಿ ಸಾಹಿತ್ಯದ ಆದಿಕವಿ ನರಸೀ ಮೆಹ್ತಾ ಅಥವಾ ನರಸಿಂಹ ಮೆಹ್ತಾ.

ನಗರ ಬ್ರಾಹ್ಮಣ ಕುಲ ಎನ್ನುವುದು ಗುಜರಾತಿನ ಬ್ರಾಹ್ಮಣರಲ್ಲಿ ಒಂದು ಪಂಗಡ. ನರಸಿಂಹ ಮೆಹ್ತಾ ಹುಟ್ಟಿದ್ದು ಈ ಕುಲದಲ್ಲಿ, ತಲಜಾ ಎಂಬ ಗ್ರಾಮದಲ್ಲಿ. ಅದು ಗುಜರಾತಿನ ಜುನಾಗಢ ನಗರದ ಹತ್ತಿರ ಇದೆ. ೧೪೧೪ರಲ್ಲಿ ಹುಟ್ಟಿದ ನರಸಿಂಹನು ತನ್ನ ತಂದೆತಾಯಿಗಳನ್ನು ಐದು ವರ್ಷದವನಿದ್ದಾಗ ಕಳೆದುಕೊಂಡನು. ಇಷ್ಟಲ್ಲದೆ ಎಂಟು ವರ್ಷ ವಯಸ್ಸಾಗುವ ತನಕ ಅವನಿಗೆ ಮಾತೇ ಬರುತ್ತಿರಲಿಲ್ಲ. ಚಿಕ್ಕ ವಯಸ್ಸಿನಲ್ಲಿಯೇ ಜುನಾಗಢಕ್ಕೆ ಬಂದ ಅವನು ತನ್ನ ಅಜ್ಜಿಯ ಆರೈಕೆಯಲ್ಲಿ ಬೆಳೆದನು. ಆಕೆಯ ಹೆಸರು ಜಯಾ ಕುನ್ವರ್ ಎಂದು.

ನರಸಿಂಹನಿಗೆ ಒಬ್ಬ ಅಣ್ಣನಿದ್ದನು. ಅವನ ಹೆಸರು ಬನ್ಸೀಧರ. ಅವನು ನರಸಿಂಹನಿಗಿಂತ ಹದಿನೇಳು ವರ್ಷ ವಯಸ್ಸಿನಲ್ಲಿ ದೊಡ್ಡವನು. ಅವನಿಗೆ ಮದುವೆಯಾಗಿತ್ತು. ಹೆಂಡತಿಯ ಹೆಸರು ಗೌರಿ ಎಂದು. ನರಸಿಂಹನು ಜುನಾಗಢದ ಹಾಟಕೇಶ್ವರ ದೇವಸ್ಥಾನಕ್ಕೆ ತನ್ನ ಅಜ್ಜಿಯ ಜೊತೆಗೆ ಆಗಾಗ್ಗೆ ಹೋಗುತ್ತಿದ್ದನು. ಅಲ್ಲಿ ಭಜನೆಗಳನ್ನು ಅತ್ಯಾಸಕ್ತಿಯಿಂದ ಕೇಳುತ್ತಿದ್ದನು. ಅವನಿಗೆ ಈಗ ಎಂಟು ವರ್ಷ ವಯಸ್ಸು. ಇನ್ನೂ ಮಾತು ಬರುತ್ತಿರಲಿಲ್ಲ. ಒಮ್ಮೆ ಶಿವ ಮಂದಿರಕ್ಕೆ ಹೋದಾಗ ಒಬ್ಬ ಸಾಧುವಿನ ದರ್ಶನವನ್ನು ಮಾಡಿದನು. ಹುಡುಗನತ್ತ ದೃಷ್ಟಿ ಹರಿಸಿದ ತಪಸ್ವಿಯು ‘ಮುಂದೆ ಈ ಹುಡುಗ ಮಹಾತ್ಮನಾಗುವನು’ ಎಂದು ಭವಿಷ್ಯ ನುಡಿದನು. ಇದನ್ನು ಕೇಳಿದ ಆತನ ಅಜ್ಜಿ ಹುಡುಗನ ಕಿವುಡುತನದ ಬಗ್ಗೆ ಸಾಧುವಿಗೆ ಅರಿಕೆ ಮಾಡಿಕೊಂಡಳು. ಸಾಧುವು ನರಸಿಗೆ ಗಿಡ ಮೂಲಿಕೆಯ ಔಷಧವನ್ನು ಕೊಟ್ಟು ‘ರಾಧೇ ಕೃಷ್ಣ’ ಎಂದು ಉಚ್ಚರಿಸುವಂತೆ ಹೇಳಿದನು. ಔಷಧವನ್ನು ಸೇವಿಸಿದ ನರಸಿಂಹನು ಆಶ್ಚರ್ಯವೆಂಬಂತೆ, ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಮಾತನಾಡಿದನು. ‘ರಾಧೇ ಕೃಷ್ಣ, ರಾಧೇ ಕೃಷ್ಣ’ ಎಂದು ಉಚ್ಚರಿಸಿದನು.

ಇದಾದ ಮೇಲೆ ನರಸಿಂಹನು ಸಂಸ್ಕೃತ ಪಾಠಶಾಲೆಗೆ ಹೋಗಲಾರಂಭಿಸಿದನು. ಶಾಲೆಯಿಂದ ಬಂದ ಮೇಲೆ ಹಾಟಕೇಶ್ವರ



ಮಹಾದೇವನ ಮಂದಿರಕ್ಕೆ ಹೋಗಿ, ಭಕ್ತರ ಜೊತೆಗೆ ಸೇರಿಕೊಂಡು ಭಜನೆಗಳನ್ನು ಹಾಡುತ್ತಿದ್ದನು. ಇವನು ಸಂನ್ಯಾಸಿಯಾಗಿ ಬಿಡುವನೇನೋ ಎಂದು ಅವನ ಅಜ್ಜಿಗೆ ಭಯವಾಯಿತು. ಒಡನೆ ಅವನಿಗೆ ಮದುವೆ ಮಾಡಿಬಿಟ್ಟಳು. ವಧುವಾಗಿ ಬಂದವಳು ಇನ್ನೂ ಏಳು ವರ್ಷದ ಬಾಲೆ ಮನೇಕಾ ಬಾಯಿ. ಮದುವೆ ನಡೆದದ್ದು ೧೪೨೯ರಲ್ಲಿ.

ನರಸಿಂಹನು ಹೆಂಡತಿಯ ಜೊತೆಗೆ ಅಣ್ಣನ ಮನೆಯಲ್ಲಿಯೇ ಸಂಸಾರ ಹೂಡಿದನು. ಕಾಲಾಂತರದಲ್ಲಿ ಅವನಿಗೆ ಕುನ್ವರಿಬಾಯಿ ಎಂಬ ಮಗಳು ಮತ್ತು ಶ್ಯಾಮಲ್ ಎಂಬ ಮಗ ಹುಟ್ಟಿದರು. ಮನೆಯಲ್ಲಿ ಮಕ್ಕಳು ಮರಿ ಹೆಚ್ಚಾಗಿ ಹೋದರು. ಬಡತನ ಕಿತ್ತು ತಿನ್ನುತ್ತಿತ್ತು. ಮೊದಲೇ ಅಣ್ಣನ ಹೆಂಡತಿ ಗೌರಿಗೆ ನರಸಿಂಹನ ಮೇಲೆ ತಾತ್ಸಾರ. ಈಗಂತೂ ನರಸಿಂಹನಿಗೆ ಇಲ್ಲಸಲ್ಲದ ತೊಂದರೆ ಕೊಡಲಾರಂಭಿಸಿದಳು. ತನ್ನ ಗಂಡ ಬನ್ಸೀಧರನ ಹತ್ತಿರ ಚಾಡಿ ಹೇಳಲು ಆರಂಭಿಸಿದಳು. ಆದರೆ ಅಜ್ಜಿಯ ಸಹಾಯದಿಂದ ನರಸಿಂಹನು ತನ್ನ ಮಗಳ ಮದುವೆಯನ್ನು ಮಾಡಿದನು. ಉನಾ ನಗರದ ಧನಿಕನೊಬ್ಬನ ಮಗನೊಂದಿಗೆ ಕುನ್ವರಿ ಬಾಯಿಯ ವಿವಾಹವಾಯಿತು. ಇದಾದ ಸ್ವಲ್ಪದಿನಗಳಲ್ಲಿಯೇ ೯೫ ವರ್ಷ

ವಯಸ್ಸಾಗಿದ್ದ ಅವನ ಅಜ್ಜಿ ಜಯಾ ಕುನ್ವರ್ ಮರಣ ಹೊಂದಿದಳು.

ಅಜ್ಜಮ್ಮನ ನಿಧನದ ನಂತರ ಅತ್ತಿಗೆ ಗೌರಿಯ ಅಟ್ಟಹಾಸ ಮೇರೆಮೀರಿತು. ಅವಳು ನರಸಿಂಹನನ್ನು ಹಗಲಿರುಳೂ ಹಂಗಿಸುತ್ತಿದ್ದಳು. ಊಟ ನೀಡುವುದಕ್ಕೂ ನಿರಾಕರಿಸುತ್ತಿದ್ದಳು. ಮನೆ ವಾರ್ತೆಗೆ ಏನನ್ನೂ ಕೊಡುತ್ತಿಲ್ಲ ಎಂದು ಗಂಡನಿಗೆ ದೂರು ನೀಡಿದಳು. ಬನ್ಸೀಧರನು ಕೂಡ ನರಸಿಂಹನನ್ನು ಹೀಯಾಳಿಸಿದನು; ಸರಿಯಾಗಿ ಬೈದನು.

ಇನ್ನು ನರಸಿಂಹನಿಗೆ ಇದನ್ನು ತಡೆದುಕೊಳ್ಳಲಾಗಲಿಲ್ಲ. ಅವನು ಮನೆ ಬಿಟ್ಟು ಹತ್ತಿರದ ಕಾಡಿಗೆ ಹೋದನು. ಜುನಾಗಢಕ್ಕೆ ಹತ್ತಿರವಿರುವ ಒಂದು ಪಾಳುಬಿದ್ದ ಶಿವಮಂದಿರವನ್ನು ಆಶ್ರಯಿಸಿದನು. ಏಳು ದಿನಗಳ ಕಾಲ ಅನ್ನನೀರುಗಳಿಲ್ಲದೆ ಉಪವಾಸ ವ್ರತವನ್ನು ಕೈಗೊಂಡನು. ಶಿವನು ಈ ತಪಸ್ಯೆಯಿಂದ ಸುಪ್ರೀತನಾದನು. ಆ ಮಂದಿರದ ಅಧಿದೇವತೆಯಾದ ಗೋಪನಾಥ ಮಹಾದೇವನು ದರ್ಶನವನ್ನು ನೀಡಿದನು. ವರವನ್ನು ಕೇಳುವಂತೆ ಹೇಳಿದನು. ಶ್ರೀಕೃಷ್ಣನ ರಾಸಲೀಲೆಯ ದರ್ಶನವನ್ನು ಮಾಡಿಸುವಂತೆ ನರಸಿಂಹನು ಶಿವನನ್ನು ಕೇಳಿಕೊಂಡನು. ಮಹಾದೇವನ ದಯದಿಂದ ಆ ದರ್ಶನವೂ ಆಯಿತು.

ಈ ಘಟನೆಯಿಂದ ನರಸಿಂಹನ ಜೀವನದಲ್ಲಿ ಮಹತ್ತರವಾದ ಪರಿವರ್ತನೆ ಉಂಟಾಯಿತು. ನರಸಿಂಹನು ಭಗವದಾನಂದದಲ್ಲಿ ಮುಳುಗಿಹೋದನು. ನರಸಿಂಹನು ಸಂತ 'ನರಸಿಂಹ' ಅಥವಾ 'ನರಸೀ' ಆಗಿಬಿಟ್ಟನು. ಭಗವದ್ಭಕ್ತಿಯಿಂದ ಉನ್ಮತ್ತನಾದ ಸಂತ ನರಸಿಂಹ ಮೆಹ್ತಾ ಸಂತೋಷದಿಂದ ಭಗವನ್ನಾಮ ಸಂಕೀರ್ತನೆಯನ್ನು ಮಾಡುತ್ತ, ನಗುನಗುತ್ತ ಜುನಾಗಢದತ್ತ ನಡೆದರು. ನರಸಿಂಹರು ಮೊದಲು ಅಣ್ಣನ ಮನೆಗೆ ಹೋಗಿ ಅತ್ತಿಗೆಗೆ ನಮಸ್ಕಾರ ಮಾಡಿದರಂತೆ. ಆಕೆ ಅವಮಾನ ಮಾಡಿದ್ದರಿಂದಲೇ ಅವರಿಗೆ ವೈರಾಗ್ಯವುಂಟಾದದ್ದು! ಅದಕ್ಕಾಗಿಯೇ ಅವರು ಮನೆಬಿಟ್ಟು ಹೋಗಿ ಶಿವನ ದರ್ಶನ ಪಡೆದು ದಿವ್ಯಾನುಭವವನ್ನು ಪಡೆದುಕೊಂಡದ್ದು!

ತಮ್ಮ ಹೆಂಡತಿ ಮತ್ತು ಮಕ್ಕಳ ಜೊತೆಗೆ ಸಂತ ನರಸಿಂಹರು ಜುನಾಗಢದಲ್ಲಿ ಬೇರೆ ಮನೆ ಮಾಡಿದರು. ಒಮ್ಮೆ ಪಿತೃಶ್ರಾದ್ಧವನ್ನು ಮಾಡಬೇಕಾಗಿತ್ತು. ಅದಕ್ಕಾಗಿ ಅವರು ಊರಿನ ಬ್ರಾಹ್ಮಣರಲ್ಲಿ ಕೆಲವರನ್ನು ಆಹ್ವಾನಿಸಿದರು. ಅಡುಗೆಗಾಗಿ ತುಪ್ಪ ಬೇಕಾಗಿತ್ತು. ತುಪ್ಪವನ್ನು ತರಲು ನರಸಿಂಹ ಮೆಹ್ತಾ ಪೇಟೆಗೆ ಹೋದರು. ದಾರಿಯಲ್ಲಿ ಒಬ್ಬ ಭಕ್ತನು ಎದುರಾದನು. ಊರಿನಲ್ಲಿ ನಡೆಯುತ್ತಿದ್ದ ಸಂಕೀರ್ತನೆಯೊಂದಕ್ಕೆ ಕರೆದುಕೊಂಡು ಹೋದನು. ಮೆಹ್ತಾ ಭಜನೆಯಲ್ಲಿ ಪಾಲ್ಗೊಂಡರು. ಮನೆಯಲ್ಲಿ ನಡೆಯಬೇಕಾದ ಆರಾಧನೆಯನ್ನು ಸಂಪೂರ್ಣ ಮರೆತುಬಿಟ್ಟರು. ಹಾಡುಗಳನ್ನು ಕಟ್ಟಿ ಹಾಡುತ್ತ ನಿಂತುಬಿಟ್ಟರು. ಅವುಗಳಲ್ಲಿ ಒಂದು ಹೀಗಿತ್ತು: **ಪ್ರಾಣ್ ತಕಿ ಮನೆ ವೈಷ್ಣವ ವಹಾಲಾ** – 'ಭಗವದ್ಭಕ್ತನು ನನ್ನ ಪ್ರಾಣ ಕ್ಕಿಂತಲೂ ಹೆಚ್ಚಿನವನು'.

ಇಷ್ಟರಲ್ಲಿ ಒಂದು ಅವಗಢ ನಡೆದುಹೋಗಿತ್ತು. ಯಾರೋ ಒಬ್ಬ ಕುತಂತ್ರಿಯು ಊರಿನ ಬ್ರಾಹ್ಮಣರನ್ನೆಲ್ಲ ನರಸೀ ಮೆಹ್ತಾನ ಮನೆಯ ಶ್ರಾದ್ಧ ಭೋಜನಕ್ಕೆ ಕರೆದುಬಿಟ್ಟಿದ್ದನು. ಮನೆಯ ಮುಂದೆ ನೂರಾರು ಬ್ರಾಹ್ಮಣರು ಸೇರಿಬಿಟ್ಟಿದ್ದರು. ಮನೇಕಾ ಬಾಯಿಗೆ ಏನು ಮಾಡುವುದೆಂದು ತೋಚಲಿಲ್ಲ. ಅಷ್ಟರಲ್ಲಿ ಎಲ್ಲಿಂದಲೋ ಅಡುಗೆಯವರು ಬಂದುಬಿಟ್ಟರು, ಅಡುಗೆಯ ಸಾಮಾನುಗಳೂ ಗಾಡಿಗಟ್ಟಲೆ ಬಂದುಬಿದ್ದವು. ಬಾಣಸಿಗರು ಅಡುಗೆಗೆ ಶುರು ಹಚ್ಚೇಬಿಟ್ಟರು. ರುಚಿಕಟ್ಟಾದ ಭಕ್ಷ್ಯಭೋಜ್ಯಗಳಲ್ಲದೆ, ಗುಜರಾತಿನ ಪ್ರಸಿದ್ಧ ಸಿಹಿತಿಂಡಿಗಳೂ ತಯಾರಾದವು.

ಇತ್ತ ಸಂತರು ಮೈಮರೆತು ಹಾಡುತ್ತಲೇ ಇದ್ದರು; ಭಜನೆ ಮಾಡುತ್ತಲೇ ಇದ್ದರು; ಉನ್ಮತ್ತರಾಗಿದ್ದರು. ಆ ಕಾಲದಲ್ಲಿ ಅವರ ವದನಾರವಿಂದದಿಂದ ನೂರಾರು ಗೀತೆಗಳ ಸಾಲುಗಳು ಹೊರಹೊಮ್ಮುತ್ತಿದ್ದವು. ಯಾವುದೋ ಹಂತದಲ್ಲಿ ಸಂತರಿಗೆ ಮನೆಯ ಶ್ರಾದ್ಧಾಚರಣೆಯ ನೆನಪಾಯಿತು. ತಾನು ಪೇಟೆಯಿಂದ ತುಪ್ಪ ತರಬೇಕಾಗಿತ್ತು ಎನ್ನುವುದೂ ಸ್ಮರಣೆಗೆ ಬಂತು. ಒಡನೇ ತುಪ್ಪವನ್ನು ಕೊಂಡುಕೊಂಡು ಮನೆಗೆ ಓಡಿದರು.

ಇಷ್ಟರಲ್ಲಿ ಬ್ರಾಹ್ಮಣ ಭೋಜನ ಮುಗಿದೇ ಹೋಗಿತ್ತು. ಬ್ರಾಹ್ಮಣರು ಭರ್ಜರಿ ಭೋಜನ ಮಾಡಿ ಸಂತುಷ್ಟರಾಗಿ ಹೊರಗೆ ಬರುತ್ತಿದ್ದರು. ಅವರೆಲ್ಲ 'ನರಸಿಂಹ ಭಗವಾನರಿಗೆ ಜೈ' ಎಂದು ಉದ್ಘೋಷಿಸುತ್ತಿದ್ದರು. ಸಂತ ನರಸಿಂಹರಿಗೆ ಗೊತ್ತಾಯಿತು, ಇದೆಲ್ಲ ಭಗವಂತನ ಲೀಲೆ ಎಂದು. ಶ್ರೀಹರಿಯೇ ತಮಗೆ ಸಹಾಯ ಹಸ್ತವನ್ನು ಚಾಚಿದನೆಂದು ತಿಳಿದು ಸಂತರು ಸಂತೋಷಪಟ್ಟರು.

ನರಸಿಂಹರದ್ದು ಪರಿಶುದ್ಧ ಭಕ್ತಿ. ಜಾತಿ ಮತ ಪಂಥಗಳನ್ನು ಎಣಿಸದೆ ಎಲ್ಲರ ಮನೆಗಳಿಗೂ ಹೋಗಿ ಅವರು ಭಜನೆ ಮಾಡಿ, ಆನಂದವನ್ನು ನೀಡುತ್ತಿದ್ದರು. ಬಡವ ಬಲ್ಲಿದರೆಂಬ ಭೇದವೆಣಿಸದೆ ಎಲ್ಲರಿಗೂ ಭಗವದಾನಂದವನ್ನು ಪ್ರದಾನ ಮಾಡುತ್ತಿದ್ದರು. ಒಮ್ಮೆ ಅಸ್ಪೃಶ್ಯರು ಎಂದು ಅನ್ನಿಸಿಕೊಂಡವರ ಕೇರಿಗೆ ಹೋಗಿ ಅಲ್ಲಿ ಕೂಡ ಭಜನೆಯನ್ನು ಮಾಡಿದರು. ಆಗಲೇ 'ವೈಷ್ಣವ ಜನ ತೋ ತೇನೇ ಕಹಿಯೇ ರೇ ಜೋ ಪೀಡ ಪರಾಯ್ಯೆ ಜಾನೇ ರೇ' ಎಂಬ ಅವರ ಸುಪ್ರಸಿದ್ಧ ಗೀತೆ ಹೊರಹೊಮ್ಮಿದ್ದು. ಇದನ್ನು ಕಂಡ ನಗರದ ಬ್ರಾಹ್ಮಣರು ರೊಚ್ಚಿಗೆದ್ದರು. ಅವರನ್ನು ಕುಲದಿಂದ ಬಹಿಷ್ಕರಿಸಿದರು. ಇಷ್ಟಾದರೂ ಸಂತ ನರಸಿಂಹ ಮೆಹ್ತಾ ಶಾಂತಚಿತ್ತರಾಗಿಯೇ ಇದ್ದರು. ಮನಸ್ಸಿನ ಸಾಮ್ಯತೆಯನ್ನು ಕಾಪಾಡಿಕೊಂಡಿದ್ದರು. ಮಾನಾಪಮಾನಗಳಲ್ಲಿ, ಮಿತ್ರಶತ್ರುಗಳಲ್ಲಿ ಸಮಭಾವವನ್ನು ಇಟ್ಟುಕೊಳ್ಳಬೇಕೆಂಬ ಭಗವದ್ಗೀತೆಯ ಸಂದೇಶವನ್ನು ಪರಿಪಾಲಿಸಿದರು. ಈ ಸಂದರ್ಭದಲ್ಲಿ ತಾತ್ತ್ವಿಕ ವಿಚಾರಗಳನ್ನು ಒಳಗೊಂಡ ಈ ಗೀತೆಯನ್ನು ರಚಿಸಿದರು: **'ಜ್ಯಾಂ ಲಗೀ ಆತ್ಮಾ**

**ತತ್ತ್ವ ಚಿನ್ಯೋ ನಹಿ, ತ್ಯಾಂ ಲಗೀ ಸಾಧನಾ ಸರ್ವ ಜುಠೀ'** – 'ಆತ್ಮವನ್ನು ಸಾಕ್ಷಾತ್ಕರಿಸಿಕೊಂಡ ಹೊರತು, ಎಲ್ಲ ರೀತಿಯ ಸಾಧನೆಗಳೂ ಅರ್ಥಹೀನವಾಗುತ್ತವೆ.'

ಭಗವಂತನು ಭಕ್ತರನ್ನು ಪರೀಕ್ಷಿಸುತ್ತಾನೆ. ಕಷ್ಟಗಳನ್ನು ಕೊಟ್ಟು ಪೀಡಿಸುತ್ತಾನೆ. ನರಸಿಂಹರ ಮಗ ಶ್ಯಾಮಲ ತನ್ನ ಹದಿನೇಳನೆಯ ವಯಸ್ಸಿನಲ್ಲಿ ಅಪಮೃತ್ಯುವಿಗೆ ಈಡಾದನು. ಇದನ್ನು ತಾಳಲಾಗದೆ ಹೆಂಡತಿ ಮನೇಕಾ ಬಾಯಿಯೂ ಮರಣ ಹೊಂದಿದಳು. ಇಷ್ಟಾದರೂ ಸಂತ ನರಸಿಂಹರ ಮನಸ್ಸು ಪ್ರಕ್ಷುಬ್ಧಗೊಳ್ಳಲಿಲ್ಲ. ಜೀವನದ ನಶ್ವರತೆಯ ಪರಿಪೂರ್ಣ ಅರಿವು ಅವರಿಗೆ ಇತ್ತು. ತಮ್ಮ ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನ ಮೇಲೆ ಭಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂಬ ಹಾತೊರಿಕೆಯೊಂದೇ ಅವರನ್ನು ಹಗಲಿರುಳೂ ಕಾಡುತ್ತಿತ್ತು. ಈ ಸಂದರ್ಭದಲ್ಲಿ ನರಸಿಂಹ ಮೆಹ್ತಾ ಹೀಗೆ ಹಾಡಿದರು: **ಭಲುಂ ಥಯುಂ ಭಾಂಗಿ ಜಂಜಾಲ್, ಸುಖೇ ಭಜೇಶುಂ ಶ್ರೀಗೋಪಾಲ್** – 'ಒಳ್ಳೆಯದೇ ಆಯಿತಲ್ಲ! ಮಾಯೆಯ ಹಂದರ ಕಳೆಯಿತಲ್ಲ! ನಿಶ್ಚಿಂತೆಯಿಂದ ಶ್ರೀಗೋಪಾಲನ ಭಜನೆ ಮಾಡುವ ಸುಖ ಸಿಕ್ಕಿತಲ್ಲ!'

ಸಂತರ ಜೀವನದಲ್ಲಿ ಅವರ ಮಹಾನತೆಯನ್ನು ಪರೀಕ್ಷಿಸುವ ಹಲವು ಪ್ರಸಂಗಗಳು ಎದುರಾಗುತ್ತವೆ. ಅದೇ ರೀತಿ ನರಸಿಂಹ ಮೆಹ್ತಾ ಅವರ ಜೀವನದಲ್ಲಿಯೂ ಆಯಿತು. ಅವರ ಪರಿಶುದ್ಧ ಭಕ್ತಿಯನ್ನು ಸಹಿಸದವರೂ ಇದ್ದರು. ಅವರೆಲ್ಲ ಅಲ್ಲಿನ ರಾಜನ ಹತ್ತಿರ ಹೋಗಿ ಸಂತ ನರಸಿಂಹರು ಶಾಸ್ತ್ರವಿಧಿಗಳನ್ನು ಪಾಲಿಸುತ್ತಿಲ್ಲ ಎಂದು ಆರೋಪಿಸಿದರು. ರಾಜನು ಸಂತರನ್ನು ಕರೆಸಿದನು. ''ದೇವಸ್ಥಾನದಲ್ಲಿರುವ ಶ್ರೀ ದಾಮೋದರ ಮೂರ್ತಿಗೆ ಹಾಕಿದ ಹಾರವು, ನಾಳೆ ಬೆಳಗ್ಗೆಯ ಒಳಗೆ ನಿಮ್ಮ ಕೊರಳಲ್ಲಿ ಕಂಡರೆ ಮಾತ್ರ ನೀವು ನಿರಪರಾಧಿಯೆಂದು ಪರಿಗಣಿಸುತ್ತೇನೆ'' ಎಂದನು. ಅವನನ್ನು ಸೆರೆ ಮನೆಗೆ ದೂಡಿದನು. ಸಂತ ನರಸಿಂಹರ ಕಳವಳಕ್ಕೆ ಎಣೆಯೇ ಇರಲಿಲ್ಲ. ಅವರು ಸೆರೆಮನೆಯಲ್ಲಿಯೇ ಭಗವತ್ ಸಂಕೀರ್ತನೆಯನ್ನು ಮಾಡಲು ಆರಂಭಿಸಿದರು. ಮನಸ್ಸಿನ ದುಗುಡವನ್ನು ಕಳೆದು ಭಗವದಾನಂದದಲ್ಲಿ ಮಗ್ನರಾದರು. ಸಂತರ ಗಾನವು ನಡೆಯುತ್ತಿದ್ದಂತೆ ದೇವಸ್ಥಾನದ ಬಾಗಿಲುಗಳು ತಾನೇತಾನಾಗಿ ತೆರೆದುಕೊಂಡವು. ದಾಮೋದರ ಮೂರ್ತಿಯ ಕೊರಳಲ್ಲಿ ಹಾಕಿದ್ದ ಹಾರವು ಗಾಳಿಯಲ್ಲಿ ಹಾರಿಕೊಂಡು ಬಂದು ಸೆರೆಮನೆಯಲ್ಲಿ ಭಗವದ್ಧ್ಯಾನದಲ್ಲಿ ಮಗ್ನರಾಗಿದ್ದ ಸಂತ ನರಸಿಂಹರ ಕೊರಳನ್ನು ಸೇರಿತು.

ನರಸಿಂಹ ಮೆಹ್ತಾ ಮಂಗ್ರೋಲ್ ಎಂಬ ಊರಿಗೆ ಹೋಗಿದ್ದರು. ಅಲ್ಲಿಯೇ ಭಗವಂತನ ಪಾದಗಳನ್ನು ಸೇರಿದರು. ಆಗ ಅವರ ವಯಸ್ಸು ೭೯. ಅಲ್ಲಿನ ಸ್ಮಶಾನವನ್ನು 'ನರಸಿಂಹರ ಸ್ಮಶಾನ' ಎಂದು ಕರೆಯುತ್ತಾರೆ.

ನರಸಿಂಹ ಮೆಹ್ತಾ ಭಕ್ತ ಸಂತರು ಮಾತ್ರವಲ್ಲ, ಗುಜರಾತಿ ಸಾಹಿತ್ಯದ ಆದಿಕವಿ. ಶಿವಮಂದಿರದಲ್ಲಿ ತಮಗೆ ಆದ ದಿವ್ಯ ದರ್ಶನದ ನಂತರ ೨೨,೦೦೦ ಕೀರ್ತನೆಗಳನ್ನು ರಚಿಸುತ್ತೇನೆ ಎಂದು ಅವರು ಸಂಕಲ್ಪ ಮಾಡಿದರಂತೆ! ಮೆಹ್ತಾ 'ಪದ', 'ಆಖ್ಯಾನ್' 'ಪ್ರಭಾತಿಯಾ' ಎಂಬ ಕಾವ್ಯಪ್ರಕಾರಗಳಿಗೆ ಹೆಸರಾಗಿದ್ದಾರೆ. ಅವರ ಕೀರ್ತನೆಗಳು ಎಷ್ಟು ಪ್ರಸಿದ್ಧವಾಗಿದ್ದವೆಂದರೆ, ಕಾಲಕಾಲಕ್ಕೆ ಅವುಗಳ ಭಾಷೆಯೇ ಮಾರ್ಪಟ್ಟಿತು ಎಂದು ವಿದ್ವಾಂಸರು ಹೇಳುತ್ತಾರೆ. ಅವರ ರಚನೆಗಳ ಅತ್ಯಂತ ಹಳೆಯ ಪಾಂಡುಲಿಪಿಯ ಕಾಲ ಸುಮಾರು ೧೬೧೨. ಮೆಹ್ತಾ ಶ್ರೀಕೃಷ್ಣನ ಕುರಿತಾಗಿ ಅನೇಕ ಆರಾತ್ರಿಕ ಗೀತೆಗಳನ್ನು ಮತ್ತು ಭಜನೆಗಳನ್ನು ರಚಿಸಿದ್ದಾರೆ. ಇವುಗಳು ಹಲವಾರು ಗ್ರಂಥಗಳಲ್ಲಿ ಪ್ರಕಟವಾಗಿವೆ.

ನರಸಿಂಹ ಮೆಹ್ತಾ ಅವರ ಗ್ರಂಥರಾಶಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು:

೧. **ಆತ್ಮಚರಿತ್ರೆಯನ್ನು ಉಲ್ಲೇಖಿಸುವ ರಚನೆಗಳು:** ನರಸಿಂಹರ ಅನೇಕ ರಚನೆಗಳು ಅವರ ಜೀವನದ ಒಳಮುಖಗಳನ್ನು ಮತ್ತು ಅನೇಕ ಘಟನೆಗಳನ್ನು ನಮಗೆ ಪರಿಚಯ ಮಾಡಿಕೊಡುತ್ತವೆ. ಭಗವಂತನು ಅವರಿಗೆ ಅನೇಕ ಸನ್ನಿವೇಶಗಳಲ್ಲಿ ಸಹಾಯ ಮಾಡಿದ್ದನ್ನು ಸಂತರು ಹೃದಯಂಗಮವಾಗಿ ಈ ರಚನೆಗಳಲ್ಲಿ ವರ್ಣಿಸುತ್ತಾರೆ.

೨. **ಇತರ ಕಥಾನಕಗಳು:** ಶ್ರೀಮದ್ಭಾಗವತದ ಕಥೆಗಳನ್ನು ಆಧರಿಸಿದ ಅನೇಕ ರಚನೆಗಳನ್ನು ಸಂತ ನರಸಿಂಹರು ರಚಿಸಿದ್ದಾರೆ. ಇವುಗಳನ್ನು 'ಆಖ್ಯಾನ'ಗಳೆಂದು ಕರೆಯುತ್ತಾರೆ. ಇಂಥ ಕಾವ್ಯಪ್ರಕಾರವನ್ನು ಗುಜರಾತಿ ಭಾಷೆಯಲ್ಲಿ ಆರಂಭಿಸಿದವರೇ ಸಂತ ನರಸಿಂಹರು.

೩. **ಶೃಂಗಾರ ಕಾವ್ಯಗಳು :** ರಾಧಾಕೃಷ್ಣರ ರಾಸಲೀಲೆಯನ್ನು ಬಣ್ಣಿಸುವ ಅನೇಕ ಗೀತೆಗಳನ್ನು ನರಸಿಂಹ ಮೆಹ್ತಾ ರಚಿಸಿದ್ದಾರೆ. ಅವು ಶೃಂಗಾರ ಶೈಲಿಯಲ್ಲಿವೆ.

ಸಂತ ನರಸಿಂಹ ಮೆಹ್ತಾ ಗುಜರಾತಿನ ಮೇರು ಕವಿಗಳು, ಸಾಹಿತಿಗಳು, ಕೀರ್ತನಕಾರರು. ಎಲ್ಲಕ್ಕಿಂತ ಮಿಗಿಲಾಗಿ ಭಗವಂತನ ಪ್ರೇಮಸುಧೆಯನ್ನು ಸವಿದು ಎಲ್ಲರಿಗೂ ಅದನ್ನು ಉಣಬಡಿಸಿದ ಮಹಾನ್ ಭಗವತ್ಪ್ರೇಮಿಗಳು.

---

ಗುರುವಾಕ್ಯದಲ್ಲಿ ವಿಶ್ವಾಸವಿಡಬೇಕು. ಗುರುವೇ ಸಚ್ಚಿದಾನಂದ, ಸಚ್ಚಿದಾನಂದನೇ ಗುರು. ಆತನ ಮಾತಿನಲ್ಲಿ ವಿಶ್ವಾಸವಿಟ್ಟರೆ, — ಬಾಲಕನ ಹಾಗೆ ವಿಶ್ವಾಸವಿಟ್ಟರೆ, — ಭಗವಂತ ದೊರೆತುಬಿಡುತ್ತಾನೆ.

ಗುರುವಾಕ್ಯದಲ್ಲಿ ಇಂಥ ವಿಶ್ವಾಸ ಬೇಕು. ಕಪಟಿಯ, ಲೆಕ್ಕಾಚಾರದ, ವಿಚಾರದ ಬುದ್ಧಿಯಿಂದ ಭಗವಂತನನ್ನು ಪಡೆಯಲಾಗುವುದಿಲ್ಲ.

ಸಚ್ಚಿದಾನಂದನೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಗುರು ಎನ್ನುವವರೇ ಇಲ್ಲ. ಆತನ ವಿನಾ ಬೇರೆ ಯಾವ ಆಸರೆಯೂ ಇಲ್ಲ. ಕೇವಲ ಆತ ಮಾತ್ರವೇ ಈ ಭವಸಾಗರದ ಅಂಬಿಗ. **– ಶ್ರೀರಾಮಕೃಷ್ಣರು**